ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–1**

---

**ಸಂಖ್ಯೆ:–ಎಡಿಎಂ2(1)ಶಿಕ್ಷಕರ ರಾಷ್ಟ್ರ ಪ್ರಶಸ್ತಿ–01/2023–24.** **ದಿನಾಂಕ: 19.07.2023.**

**–: ಸುತ್ತೋಲೆ :–**

ವಿಷಯ:–2023 ನೇ ಸಾಲಿನ " ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ " ಪ್ರಶಸ್ತಿಗೆ ಭಾಗಶಃ ಅರ್ಜಿ ಸಲ್ಲಿಸಿರುವವರು (Partially filled applicants) ದಿನಾಂಕ: 20.07.2023 ರೊಳಗೆ ಪೂರ್ಣ ಪ್ರಮಾಣದಲ್ಲಿ ಅರ್ಜಿ (Final submission) ಸಲ್ಲಿಸುವಂತೆ ತಿಳಿಸುವ ಬಗ್ಗೆ.

ಉಲ್ಲೇಖ:–1. ಶ್ರೀ ವಿಜಯ ಭಾಸ್ಕರ್, ನಿರ್ದೇಶಕರು (ನ್ಯಾಟ್), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರ ಪತ್ರ ಸಂಖ್ಯೆ: ಎಫ್. 1–23 /2023–ನ್ಯಾಟ್ ದಿನಾಂಕ: 19.07.2023.

2. ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇಲ್ಲಿಂದ ವಾಟ್ಸಾಪ್ ಮೂಲಕ ಸ್ವೀಕೃತವಾಗಿರುವ ಮಾಹಿತಿಯ ಅನುಸಾರ.

3. ಈ ಕಛೇರಿಯ ಇದೇ ಸಮ ಸಂಖ್ಯೆಯ ಸುತ್ತೋಲೆ ಪತ್ರ ದಿನಾಂಕ: 13.07.2023.

*********

2023 ನೇ ಸಾಲಿನ " ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ " ಪ್ರಶಸ್ತಿಗೆ ಆನ್ ಲೈನ್ (**https://nationalawardstoteachers.education.gov.in)** ಮೂಲಕ ಈಗಾಗಲೇ ಭಾಗಶಃ ಅರ್ಜಿ ಸಲ್ಲಿಸಿರುವವರು (Partially filled applicants) **ದಿನಾಂಕ: 20–07–2023 ರಾತ್ರಿ 11.59 ರೊಳಗೆ** ಪೂರ್ಣ ಪ್ರಮಾಣದಲ್ಲಿ ಅರ್ಜಿ (Final submission) ಸಲ್ಲಿಸಲು ಭಾರತ ಸರ್ಕಾರದ ಶಿಕ್ಷಣ ಮಂತ್ರಾಲಯದ ವ್ಯಾಪ್ತಿಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಉಲ್ಲೇಖ–01 & 02 ರ ಅನುಸಾರ ಅವಕಾಶ ಕಲ್ಪಿಸಿರುತ್ತದೆ.

**ರಾಜ್ಯದಿಂದ ಈಗಾಗಲೇ ಭಾಗಶಃ ಅರ್ಜಿ ಸಲ್ಲಿಸಿರುವವರ (Partially filled applicants) ವಿವರವಾದ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ರಾಜ್ಯದ ಸಂಬಂಧಿಸಿದ ಎಲ್ಲಾ ಶಾಲೆಗಳ ಮತ್ತು ಕಾಲೇಜುಗಳ ಮುಖ್ಯಸ್ಥರು ಹಾಗೂ ಪ್ರಾಂಶುಪಾಲರು, ಶಿಕ್ಷಕರ ತರಬೇತಿ ಕೇಂದ್ರ(ಟಿ.ಟಿ.ಐ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು, ಆಡಳಿತ/ಅಭಿವೃದ್ಧಿ/ಪದವಿ ಪೂರ್ವ ಶಿಕ್ಷಣ ಮತ್ತು ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ(ಸಿ.ಟಿ.ಇ) ಇವರುಗಳು ತಮ್ಮ–ತಮ್ಮ ವ್ಯಾಪ್ತಿಯಲ್ಲಿನ ಸದರಿ ಭಾಗಶಃ ಅರ್ಜಿ ಸಲ್ಲಿಸಿರುವ (Partially filled applicants) ಶಿಕ್ಷಕರಿಗೆ/ ಉಪನ್ಯಾಸಕರಿಗೆ/ ಮುಖ್ಯ ಶಿಕ್ಷಕರಿಗೆ/ಪ್ರಾಂಶುಪಾಲರಿಗೆ ದಿನಾಂಕ: 20.07.2023 ರಾತ್ರಿ 11.59 ರವರೆಗೆ ಪೂರ್ಣ ಪ್ರಮಾಣದಲ್ಲಿ ಅರ್ಜಿ ಸಲ್ಲಿಸಲು (Final submission) ಸಲ್ಲಿಸಲು ಮೇಲ್ಕಂಡಂತೆ ಅವಕಾಶ ಕಲ್ಪಿಸಿರುವ ಬಗ್ಗೆ ದೂರವಾಣಿ ಮೂಲಕ ಮತ್ತು ವ್ಯಾಪಕ ಪ್ರಚಾರದ ಮೂಲಕ ಮತ್ತು ಕಛೇರಿ ಸೂಚನಾ ಫಲಕಯಲ್ಲಿ**

ಅಳವಡಿಸುವುದರ ಮೂಲಕ ಗಮನಕ್ಕೆ ತರುವುದು ಮತ್ತು ಸದರಿಯವರು ನಿಗದಿತ ಅವಧಿಯೊಳಗೆ ಸುಸೂತ್ರವಾಗಿ ಪೂರ್ಣ ಪ್ರಮಾಣದಲ್ಲಿ ಅರ್ಜಿ ಸಲ್ಲಿಸಲು **(Final submission)** ಸೂಕ್ತ ಮಾರ್ಗದರ್ಶನ/ತರಬೇತಿ ನೀಡಲು ನಿಯಮಾನುಸಾರ ಸೂಕ್ತ ಕ್ರಮಗಳನ್ನು ವಹಿಸಲು ತಿಳಿಸಿದೆ.

**ಮುಂದುವರೆದು, ಉಲ್ಲೇಖ-01 ಮತ್ತು 03 ರ ಅನುಸಾರ ಜಿಲ್ಲಾ ಆಯ್ಕೆ ಸಮಿತಿ(ಡಿ.ಎಸ್.ಸಿ) ಗಳು ಮೊದಲ ಹಂತದ ಪರಿಶೀಲನೆ ನಡೆಸಿ, Annexure-1 ರಂತೆ ಅಂಕಗಳನ್ನು ನೀಡಿ ರಾಜ್ಯ ಆಯ್ಕೆ ಸಮಿತಿ (ಎಸ್.ಎಸ್.ಸಿ) ಗೆ ಆನ್-ಲೈನ್ ಮೂಲಕ 25-07-2023 ರೊಳಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.**

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ.
2. ರಾಜ್ಯದ ಎಲ್ಲಾ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳ(ಸಿ.ಟಿ.ಇ) ಗಳ ಪ್ರಾಂಶುಪಾಲರು ಮತ್ತು ಪದನಿಮಿತ್ತ ಸಹ ನಿರ್ದೇಶಕರು.
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಶಾಲಾ ಶಿಕ್ಷಣ ಇಲಾಖೆ.
4. ರಾಜ್ಯದ ಎಲ್ಲಾ ಪ್ರಾಂಶುಪಾಲರು, ಡಯಟ್ ಮತ್ತು ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ಶಾಲಾ ಶಿಕ್ಷಣ ಇಲಾಖೆ.
5. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ.
6. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ಇವರುಗಳಿಗೆ (ಆಯಾ ಉಪನಿರ್ದೇಶಕರು (ಆಡಳಿತ)ರವರ ಮೂಲಕ).
7. ರಾಜ್ಯದ ಎಲ್ಲಾ ಶಿಕ್ಷಕರ ತರಬೇತಿ ಕೇಂದ್ರಗಳ ಪ್ರಾಂಶುಪಾಲರಿಗೆ.
8. ರಾಜ್ಯದ ಎಲ್ಲಾ ಶಾಲೆಗಳ / ಪದವಿ ಪೂರ್ವ ಕಾಲೇಜುಗಳ ಮುಖ್ಯಸ್ಥರಿಗೆ (ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ / ಉಪನಿರ್ದೇಶಕರು, ಪ.ಪೂ.ಶಿ.ಇಲಾಖೆ ಇವರ ಮೂಲಕ).
9. ಈ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕರು (ಇ-ಆಡಳಿತ ಘಟಕ) ಇವರಿಗೆ ಕಳುಹಿಸುತ್ತಾ, ಮೇಲ್ಕಂಡ ಕೊಂಡಿಯನ್ನು (ಲಿಂಕ್) ಹಾಗೂ ಈ ಪ್ರತಿಯನ್ನು ಸದರಿ ಪ್ರಕ್ರಿಯೆ ಮುಗಿಯುವವರೆಗೆ ಇಲಾಖಾ ಅಂತರ್ಜಾಲ ತಾಣದ ಮುಖ ಪುಟದಲ್ಲಿ ಕಾಣುವಂತೆ ಜೋಡಿಸಲು/ ಅಳವಡಿಸಲು ತಿಳಿಸಿದೆ.
10. ಈ ಕಛೇರಿಯ ಹಿರಿಯ ಸಹಾಯಕ ನಿರ್ದೇಶಕರು (ಸಾರ್ವಜನಿಕ ಸಂಪರ್ಕ ಮತ್ತು ಶಿಕ್ಷಣ ವಾರ್ತೆ) ಇವರಿಗೆ ಕಳುಹಿಸುತ್ತಾ, ಶಿಕ್ಷಣ ವಾರ್ತೆಯಲ್ಲಿ ಪ್ರಕಟಿಸಲು ತಿಳಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ,**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಶ್ರೀ ವಿಜಯ ಭಾಸ್ಕರ್, ನಿರ್ದೇಶಕರು (ನ್ಯಾಟ್), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಶಿಕ್ಷಣ ಮಂತ್ರಾಲಯ, ಭಾರತ ಸರ್ಕಾರ, ಶಾಸ್ತ್ರೀ ಭವನ, ನವದೆಹಲಿ- 110 115 ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು.

4. ಪ್ರಾಂಶುಪಾಲರು ಮತ್ತು ಪದನಿಮಿತ್ತ ನಿರ್ದೇಶಕರು, ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಆರ್.ಐ.ಇ), ಮೈಸೂರು,ನಂ. 8J58+92W, ಮಾನಸ ಗಂಗೋತ್ರಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಎದುರು, ಮೈಸೂರು ವಿಶ್ವವಿದ್ಯಾನಿಲಯದ ಆವರಣ, ಮೈಸೂರು-570 006.
5. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ಇವರುಗಳಿಗೆ ಕಳುಹಿಸುತ್ತಾ, ತಮ್ಮ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರ ನೀಡಲು ತಿಳಿಸಿದೆ.
6. ನಿರ್ದೇಶಕರು, ಪ್ರೌಢಶಿಕ್ಷಣ/ಉರ್ದು ಮತ್ತು ಇತರ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
7. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ), 100 ಅಡಿ ಹೊರ ವರ್ತುಲ ರಸ್ತೆ, 3 ನೇ ಹಂತ, ಬನಶಂಕರಿ, ಬೆಂಗಳೂರು ಇವರಿಗೆ ಕಳುಹಿಸುತ್ತಾ, ತಮ್ಮ ಕಛೇರಿ, ರಾಜ್ಯದ ಎಲ್ಲಾ ಸಿ.ಟಿ.ಇ., ಡಯಟ್‌ಗಳ ಮತ್ತು ಟಿ.ಟಿ.ಐಗಳ ಮೂಲಕ ಮೇಲ್ಕಂಡ ಪ್ರಕ್ರಿಯೆಯ ಕುರಿತು ವ್ಯಾಪಕ ಪ್ರಚಾರ ಮತ್ತು ಮಾರ್ಗದರ್ಶನ/ತರಬೇತಿ ನೀಡುವುದರ ಮೂಲಕ ರಾಜ್ಯದಿಂದ ಹೆಚ್ಚಿನ ಸಂಖ್ಯೆಯಲ್ಲಿ ಅರ್ಹರು ಯಶಸ್ವಿಯಾಗಿ ಅರ್ಜಿ ಸಲ್ಲಿಸಿ, ಸದರಿ ಪ್ರಶಸ್ತಿಗೆ ಭಾಜನರಾಗಲು ಕ್ರಮವಹಿಸಲು ತಿಳಿಸಿದೆ.
8. ಜಂಟಿ ನಿರ್ದೇಶಕರು (ಆಡಳಿತ), ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.
9. ಉಪ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು. ಬೆಂಗಳೂರು.
10. ಉಪ ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆ.ಜಿ ರಸೆ, ಬೆಂಗಳೂರು.
11. ರಾಜ್ಯದ ಎಲ್ಲಾ ಭಾಗಶಃ ಅರ್ಜಿ ಸಲ್ಲಿಸಿರುವ (Partially filled applicants) ಶಿಕ್ಷಕರು/ಉಪನ್ಯಾಸಕರು/ಮುಖ್ಯ ಶಿಕ್ಷಕರು/ಪ್ರಾಂಶುಪಾಲರಿಗೆ (ಆಯಾ ಶಾಲಾ/ಕಾಲೇಜುಗಳ ಮುಖ್ಯಸ್ಥರ ಮೂಲಕ).
12. ಕಛೇರಿ ಪ್ರತಿ.